ಸಿಲ್ಕ್ ಅಥವಾ ಸಿಂಥೆಟಿಕ್ ಡ್ರೆಸ್‌ಗೆ ನೆಟೆಡ್ ಬಟ್ಟೆಯ ಬೆಲ್ ಸ್ಲೀವ್ಸ್ ಹೆಚ್ಚು ಆಕರ್ಷಕವಾಗಿ ಕಾಣುತ್ತದೆ. ಸಿಂಥೆಟಿಕ್ ಲೆಹೆಂಗಾಗೆ ಫ್ಲೇಯರ್ಡ್ ವಿನ್ಯಾಸದ ಬೆಲ್ ಸ್ಲೀವ್ಸ್ ಹಚ್ಚುವುದು ಈಗಿನ ಟ್ರೆಂಡ್.

ಬೆಲ್ ಸ್ಲೀವ್ಸ್ ಇತಿಹಾಸ ಇಂದು ನಿನ್ನೆಯದಲ್ಲ. ಮಧ್ಯಕಾಲೀನ ಯುಗದಲ್ಲಿ ಪಾದ್ರಿಗಳು ಬೆಲ್ ಸ್ಲೀವ್ಸ್ ಇರುವ ಉಡುಗೆಗಳನ್ನು ತೊಡುತ್ತಿದ್ದರು. ಕಾಲಾನಂತರ ಈ ಶೈಲಿಯ ಧಾರ್ಮಿಕ ಭಾವನೆ ಕರಗಿ ಮೇಲ್ವರ್ಗದವರು ಈ ಶೈಲಿಗೆ ಆಕರ್ಷಿತರಾದರು. ಬಳಿಕ ಜನ ಸಾಮಾನ್ಯರೂ ಈ ಶೈಲಿಯನ್ನು ಅನುಸರಿಸತೊಡಗಿದರು. ಈಗ ಎಲ್ಲ ಬಗೆಯ ಉಡುಗೆಗಳಿಗೂ ಬೆಲ್ ಶೈಲಿ ಸರ್ವೇ ಸಾಮಾನ್ಯ ಎಂಬಂತೆ ಹಾಸುಹೊಕ್ಕಿದೆ.

### ಡಬಲ್ ಲೇಯರ್ ಬೆಲ್ ಸ್ಲೀವ್ಸ್

ಪಾರ್ಟಿ, ಚಿಕ್ಕ ಚಿಕ್ಕ ಸಮಾರಂಭಗಳಲ್ಲಿ ಹೆಚ್ಚು ಆಕರ್ಷಣೀಯವಾಗಿ ಕಾಣಬೇಕೆಂದರೆ ಹಾಗೂ ಹೆಚ್ಚು ಅದ್ದೂರಿತನವೂ ಇರಬಾರದು ಎಂದು ಬಯಸುವಿರಾದರೆ ಡಬಲ್ ಲೇಯರ್ ಬೆಲ್ ಸ್ಲೀವ್ಸ್ ಡ್ರೆಸ್ ತೊಡಬಹುದು. ಇದನ್ನು ತುಂಬಾ ಉದ್ದವೂ ಅಲ್ಲದ, ಗಿಡ್ಡವೂ ಅಲ್ಲದ ಮೊಣಕೈವರೆಗೆ ಮಾತ್ರ ವಿನ್ಯಾಸ ಮಾಡಲಾಗಿರುತ್ತದೆ. ಫ್ಯಾನ್ಸಿ ಸೀರೆಗಳಿಗೆ, ಲೆಹೆಂಗಾ, ಗ್ರ್ಯಾಂಡ್ ಚೂಡಿ, ಗೌನ್, ಲಾಂಗ್ ಫ್ರಾಕ್‌ಗಳಿಗೆ ಇದು ಹೆಚ್ಚು ಸೂಕ್ತ.

### ಲಾಂಗ್ ಬೆಲ್ ಸ್ಲೀವ್ಸ್ ಬ್ಲೌಸ್

ರೇಷ್ಮೆ ಸೀರೆ, ಸಿಂಥೆಟಿಕ್ ಸೀರೆಗಳಿಗೆ ಈ ಬಗೆಯ ವಿನ್ಯಾಸವನ್ನು ಹೊಲಿಸಬಹುದು. ಭುಜದಿಂದ ತ್ರೀಫೋರ್ತ್‌ವರೆಗೆ ಮಾಮೂಲಿ ತೋಳು ಹೊಲಿಸಿ ಮುಂದೆ ಬೆಲ್ ವಿನ್ಯಾಸ ಇಡಿಸಿ ಅಂಚಿಗೆ ಚಿಕ್ಕ ಲೇಸ್ ಕೊಟ್ಟರೆ ಸಾಂಪ್ರದಾಯಿಕದ ಜೊತೆ ಟ್ರೆಂಡಿ ಲುಕ್ ನೀಡುತ್ತದೆ.

ಲೆಹೆಂಗಾ, ಸೆಲ್ವಾರ್, ಕ್ರಾಪ್‌ಟಾಪ್, ಲಾಂಗ್ ಫ್ರಾಕ್, ಶಾರ್ಟ್ ಫ್ರಾಕ್‌ಗಳಿಗೂ ಈ ವಿನ್ಯಾಸ ಆಕರ್ಷಣೀಯವಾಗಿ ಕಾಣುತ್ತದೆ.

### ಎಲ್ಬೋ ಲೆಂತ್ ಸ್ಲೀವ್ಸ್

ಲೆಹೆಂಗಾಗಳಿಗೆ ಈ ವಿನ್ಯಾಸ ಹೆಚ್ಚು ಚೆನ್ನಾಗಿರುತ್ತದೆ. ಬ್ಲೌಸ್ ಪೂರ್ತಿ ಸಿಲ್ಕ್ ಅಥವಾ ಫ್ಯಾಬ್ರಿಕ್‌ನಿಂದ ಕೂಡಿದ್ದು, ಬೆಲ್ ವಿನ್ಯಾಸವನ್ನು ಅದೇ ಬಣ್ಣದ ಅಥವಾ ಕಾಂಟ್ರಾಸ್ಟ್ ಬಣ್ಣದ ನೆಟೆಡ್ ಬಟ್ಟೆಯಲ್ಲಿ ಹೊಲಿದರೆ ಟ್ರೆಂಡಿ ಲುಕ್ ನೀಡುತ್ತದೆ. ಶಾರ್ಟ್ ಫ್ರಾಕ್, ಕಾಟನ್ ಫ್ರಾಕ್, ಲಾಂಗ್ ಗೌನ್‌ಗಳಿಗೆ ಈ ವಿನ್ಯಾಸ ಹೆಚ್ಚು ಸೂಕ್ತ.

### ಸೀರೆ ರವಿಕೆಗಿರಲಿ ಈ ವಿನ್ಯಾಸ

ಜೀನ್ಸ್ ಟಾಪ್, ಕುರ್ತಿ, ಚೂಡಿಗೆ ಮಾತ್ರ ಸೀಮಿತವಾಗಿದ್ದ ಬೆಲ್ ಸ್ಲೀವ್ಸ್ ವಿನ್ಯಾಸ ಸೀರೆ ರವಿಕೆಗೂ ಬಂದಿದೆ. ಅದರಲ್ಲೂ ಫ್ಯಾನ್ಸಿ ಸೀರೆಗಳ ಬ್ಲೌಸ್‌ಗಳಲ್ಲಿ ಮಾತ್ರವೇ ಕಾಣಿಸಿಕೊಳ್ಳುತ್ತಿದ್ದ ಬೆಲ್ ಸ್ಲೀವ್ಸ್ ಸಿಲ್ಕ್ ರವಿಕೆಗಳನ್ನೂ ಆವರಿಸಿದೆ.





## ಚಿಕ್ಕಮಕ್ಕಳಿಗೆ ಅಚ್ಚುಮೆಚ್ಚು

ಬೆಲ್ ಸ್ಲೀವ್ಸ್ ಚಿಕ್ಕ ಮಕ್ಕಳನ್ನು ಹೆಚ್ಚು ಆಕರ್ಷಿಸುತ್ತಿದೆ. ತೋಳುಗಳು ಅಗಲವಾಗಿ ಹರಡುವ ಜತೆಗೆ ಸರಾಗವಾಗಿ ಗಾಳಿಯಾಡುವ ಕಾರಣಕ್ಕೆ ಮಕ್ಕಳಿಗೆ ಈ ಉಡುಪು ಹೆಚ್ಚು ಇಷ್ಟವಾಗುತ್ತಿದೆ. ಕೈ ಮೇಲೆತ್ತಿದಾಗ ಭುಜಕ್ಕೆ ಬೀಳುವ, ಡಾನ್ಸ್ ಮಾಡುವಾಗ ಗಾಳಿಯ ಜತೆ ಹರಿದಾಡುವ ಕಾರಣದಿಂದಲೂ ಮಕ್ಕಳಿಗೆ ಈ ಉಡುಪು ಹೆಚ್ಚು ಇಷ್ಟವಾಗುವುದು.

ಕ್ರಾಪ್‌ಟಾಪ್, ಫ್ರಾಕ್, ಲಾಂಗ್ ಫ್ರಾಕ್, ಜೀನ್ಸ್ ಟಾಪ್, ಸೆಲ್ವಾರ್, ಲೆಹೆಂಗಾ ಹೀಗೆ ಎಲ್ಲದಕ್ಕೂ ಬೆಲ್ ಸ್ಲೀವ್ ಇರಬೇಕೆಂದು ಮಕ್ಕಳು ಬಯಸುತ್ತವೆ. ಬೆಲ್ ಸ್ಲೀವ್ಸ್ ಮಾದರಿಯಲ್ಲೇ ಬೆಲ್ ಬಾಟಮ್ ವಿನ್ಯಾಸದ ಡ್ರೆಸ್ ಈಗ ಟ್ರೆಂಡ್ ಆಗಿದೆ.

### ಹೀಗಿರಲಿ ಕಿವಿಯೋಲೆ

ಒಂದೊಂದು ಬಗೆಯ ವಿನ್ಯಾಸದ ಉಡುಪಿಗೆ ಒಂದೊಂದು ಬಗೆಯ ಕಿವಿಯೋಲೆ, ಆಭರಣಗಳು ಮ್ಯಾಚ್ ಆಗುತ್ತವೆ. ಎಲ್ಲ ಬಗೆಯ ಉಡುಪುಗಳಿಗೂ ಎಲ್ಲ ಒಡವೆಗಳು ಹೊಂದಿಕೆಯಾಗುವುದಿಲ್ಲ. ಇದನ್ನು ಅರಿತು ಆಭರಣ ಧರಿಸಿದರೆ ಭಿನ್ನ ಲುಕ್ ನಿಮ್ಮದಾಗುತ್ತದೆ. ಬೆಲ್ ಸ್ಲೀವ್ಸ್ ವಿನ್ಯಾಸದ ಬಟ್ಟೆ ತೊಡುವಿರಾದರೆ ದುಂಡನೆ ಅಥವಾ ಇಳಿ ಬೀಳುವ ಕಿವಿಯೋಲೆ ಹೆಚ್ಚು ಹೊಂದುತ್ತದೆ. ಸೀರೆಗೆ ಬೆಲ್ ಸ್ಲೀವ್ಸ್ ತೊಡುವಿರಾದರೆ ಜುಮುಕಿ, ಹರಳಿನ ಇಳಿ ಬೀಳುವ ಹ್ಯಾಂಗಿಂಗ್ ತೊಡಬಹುದು.

ಸೀರೆಗಳು ಸಾಮಾನ್ಯವಾಗಿ ಸಾಂಪ್ರದಾಯಿಕ ಲುಕ್ ನೀಡುತ್ತವೆ. ಬಹುತೇಕರಿಗೆ ಇದು ಇಷ್ಟವಿರುವುದಿಲ್ಲ. ಕೆಲವೊಮ್ಮೆ ಅನಿವಾರ್ಯತೆಗೆ ಕಟ್ಟುಬಿದ್ದು ಸೀರೆ ತೊಡುವವರೇ ಹೆಚ್ಚು. ಇಂತಹ ಸಮಯದಲ್ಲಿ ಸಾಂಪ್ರದಾಯಿಕ ಶೈಲಿಗೆ ಆಧುನಿಕ ಟಚ್ ನೀಡಿದರೆ ಟ್ರೆಂಡಿಯಾಗಿ ಕಾಣಲು ಸಾಧ್ಯ. ಆಗ ಬೆಲ್ ಸ್ಲೀವ್ಸ್ ನೆರವಿಗೆ ಬರುತ್ತದೆ.

ಸೀರೆಗಳಿಗೆ ಒಂದೇ ತೆರನಾದ ವಿನ್ಯಾಸದ ಬ್ಲೌಸ್ ತೊಟ್ಟು ಬೋರಾಗಿದ್ದರೆ ಬೆಲ್ ಸ್ಲೀವ್ಸ್ ವಿನ್ಯಾಸವನ್ನೊಮ್ಮೆ ಟ್ರೈ ಮಾಡಬಹುದು. ಸಿಲ್ಕ್ ರವಿಕೆಯಲ್ಲಿ ಭುಜದಿಂದ ಮೊಣಕೈವರೆಗೆ ಎಂಬ್ರಾಯಿಡರಿ ವಿನ್ಯಾಸದಲ್ಲಿ ಸಹಜ ತೋಳು ಹೊಲಿದು ಮೊಣಕೈಯಿಂದ ಮುಂದಕ್ಕೆ ಅರ್ಧ ಅಥವಾ ಒಂದು ಇಂಚು ನೆರಿಗೆಯನ್ನು ತೋಳಿನ ಸುತ್ತಲೂ ಇಟ್ಟು ವಿನ್ಯಾಸಗೊಳಿಸಲಾಗುತ್ತದೆ. ಈದು ಹೆಚ್ಚು ಟ್ರೆಂಡ್‌ನಲ್ಲಿದೆ.